member. Agreement is different and payment of amount is different. First part is to pay water rate. I will see that today or tomorrow or within a week; the amount is paid to Maharashtra Government to release water.

ಶ್ರೀ ಎಸ್.ಸುಭಾಷ್ ಜೋಷಿ: ಅಗ್ರಿಮೆಂಟ್ ಬೇಕಾದರೆ ಆಮೇಲೆ ಮಾಡಬಹುದು. ಮೊದಲು ಈ ಬಗ್ಗೆ ಫ್ಯಾಕ್ಸ್ ಕಳುಹಿಸಬೇಕು.

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಉಪಾಧ್ಯಕ್ಷರೆ, ಇದೇ ದಿವಸ 5 ಗಂಟೆಯೊಳಗಾಗಿ ಮಹಾರಾಷ್ಟ್ರ ಸರ್ಕಾರಕ್ಕೆ ಫ್ಯಾಕ್ಸ್ ಕಳುಹಿಸಿಕೊಡುತ್ತೇವೆ. ಅದರ ಕಾಪಿಯನ್ನು ತಮಗೂ ಒದಗಿಸಿಕೊಡುತ್ತೇನೆ.

ವಿಷಯ: ಮಂಡ್ಯ ತಾಲ್ಲೂಕಿನ ಕೂತ್ತತ್ತಿ ಹೋಬಳಿ ಚನ್ನಪ್ಪನ ದೊಡ್ಡಿ ಗ್ರಾಮದ ಶೈಲಜಾ ಎಂಬುವವರಿಗೆ ನ್ಯಾಯ ದೊರಕಿಸಿಕೊಡುವುದು.

+ ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಸನ್ಮಾನ್ಯ ಉಪಾಧ್ಯಕ್ಷರೆ, ನಾನು ಈಗ ಹೇಳುವ ವಿಷಯವನ್ನು ವಿಶೇಷವಾಗಿ ಮಹಿಳಾ ಶಾಸಕಿಯರು ಬಹಳ ಗಂಭೀರವಾಗಿ ಈ ವಿಚಾರದಲ್ಲಿ ಚಿಂತನೆ ಮಾಡಬೇಕು. ಈ ವಿಷಯವನ್ನು ಗಿನ್ನೀಸ್ ಬುಕ್‌ನಲ್ಲಿ ಬರೆದು ಇಡಬಹುದು. ಅದೇನೆಂದರೆ, ಮಂಡ್ಯ ತಾಲ್ಲೂಕು ಕೊತ್ತತ್ತಿ ಹೋಬಳಿ, ಚನ್ನಪ್ಪನ ದೊಡ್ಡಿ ಗ್ರಾಮದಲ್ಲಿ, ಶೈಲಜಾ ಮತ್ತು ನಿಂಗೇಗೌಡ ಎನ್ನುವವರು ಸುಮಾರು 70 ದಿವಸಗಳ ಹಿಂದೆ ಒಬ್ಬರನ್ನೊಬ್ಬರು ಪ್ರೀತಿಸುತ್ತಿದ್ದರು. ಪ್ರೀತಿಸತಕ್ಕಂಥ ಸಮಯದಲ್ಲಿ ಆ ಊರಿನ ಪ್ರಮುಖರ ಕೈಗೆ ಸಿಕ್ಕಿದರು, 9 ಜನರು ಈ ಬಗ್ಗೆ ನ್ಯಾಯ ಮಾಡಿ ಅವರಿಬ್ಬರಿಗೂ ಮದುವೆ ಮಾಡಬೇಕೆನ್ನುವ ತೀರ್ಮಾನಕ್ಕೆ ಬಂದರು. ಅವರ ಸೋದರ ಮಾವ ಕೆಂಪೇಗೌಡ ಎನ್ನುವವರು ಈ ತಕ್ಷಣದಲ್ಲಿ ಮದುವೆ ಮಾಡುವುದು ಬೇಡ, ನಮಗೆ ಕಾಲಾವಕಾಶ ಕೊಡಿ, ಸಾಂಪ್ರದಾಯಕ ರೀತಿಯಲ್ಲಿ ದೊಡ್ಡದಾಗಿ ಮದುವೆ ಮಾಡೋಣವೆಂದು ಆಶ್ವಾಸನೆ ಕೊಟ್ಟು ಒಪ್ಪಿಕೊಂಡು ಹೋದರು.

12.30 ಪಿ.ಎಂ

ಹೀಗೆ ಒಪ್ಪಿಕೊಂಡು ಹೋದಮೇಲೆ ಆ ಹುಡುಗ 70 ದಿವಸಗಳಿಂದ ಕಾಣೆಯಾಗಿದ್ದಾನೆ. ಆ ಕೆಂಪೇಗೌಡ ಎನ್ನತಕ್ಕಂಥವನು ಯಾವುದೇ ಕಾರಣಕ್ಕೂ ಆ ಹುಡುಗಿಗೆ ಮದುವೆ ಮಾಡಬಾರದು ಎಂದು ಹೇಳಿ 70 ದಿವಸಗಳಿಂದ ಆ ಹುಡುಗ ಪತ್ತೆ ಇಲ್ಲ. ಪೊಲೀಸ್ ಇಲಾಖೆ ಮತ್ತು ಎಲ್ಲಾ ಇಲಾಖೆಗಳಿಗೂ ಹಾಗೂ ಪತ್ರಿಕೆಯ ಮೂಲಕ ಗಂಭೀರವಾಗಿ ಜನರ ಗಮನವನ್ನು ಸೆಳೆಯತಕ್ಕಂಥ ಕೆಲಸವನ್ನು ಮಾಡಿ, ಎಲ್ಲಾ ಮಹಿಳಾ ಸಂಘಟನೆಗಳು ಜಿಲ್ಲಾಧಿಕಾರಿಯವರ ಮುಂದೆ ಧರಣಿ ಮಾಡಿದ್ದಾರೆ. ಮಾನ್ಯ ಜಿಲ್ಲಾ

ಉಸ್ತುವಾರಿ ಸಚಿವರು ದಯಮಾಡಿ ಈ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಬೇಕು. ಸುಮಾರು 70 ದಿನಗಳ ಕಾಲ ಆ ಹುಡುಗ ಸೋದರ ಮಾವ ಕೆಂಪೇಗೌಡನ ಮನೆಯಲ್ಲಿದ್ದ, ಆ ಮನೆಯ ಮುಂದೆ ಆ ಹೆಣ್ಣು ಮಗು 70 ದಿನಗಳಿಂದ ಧರಣಿ ಮಾಡುತ್ತಿದ್ದಾಳೆ. ಈ 70 ದಿನಗಳ ಕಾಲದಲ್ಲಿ ಸೊಳ್ಳೆಗಳ ಕಡಿತದಿಂದಾಗಿ ಮೈಕೈ ಎಲ್ಲಾ ಕಜ್ಜಿ ಆಗಿದೆ. ಆ ಹುಡುಗಿಯು ತೀರ್ಮಾನ ಮಾಡಿದ್ದಾಳೆ, ತಾನು ಪ್ರೀತಿಸಿದಾತನೊಂದಿಗೆ ಮದುವೆಯಾಗಬೇಕು, ಅವನೊಂದಿಗೆ ಬದುಕಬೇಕು, ಇಲ್ಲವೆ ಸಾಯ ಬೇಕು ಎಂದು ಅದೇ ತೀರ್ಮಾನದ ಮೇಲೆ 70 ದಿನಗಳಿಂದ ಅಲ್ಲಿ ಚಳುವಳಿ ಮಾಡುತ್ತಾ ಇದ್ದಾಳೆ. ಆದರೆ ಯಾವುದೇ ಸರ್ಕಾರದ ಯಂತ್ರಗಳು ಅದರ ಬಗ್ಗೆ ಯೋಚನೆ ಮಾಡಲಿಲ್ಲ. ಎಲ್ಲಾ ಮಹಿಳಾ ಸಂಘಟನೆಗಳೂ ಚಳುವಳಿ ಮಾಡಿದವು. ಆದ್ದರಿಂದ ಇದು ಬಹಳ ಮಹತ್ವವಾದಂಥ ವಿಚಾರ. ಮಂಡ್ಯ ಜಿಲ್ಲೆಗೆ ಬಹಳ ಅವಮಾನಕರವಾಗಿರತಕ್ಕಂಥ ಸಂಗತಿ ಇದು. ಮಹಿಳೆಯರ ಬಗ್ಗೆ ಈ ರೀತಿಯಲ್ಲಿ ದೌರ್ಜನ್ಯ ಆಗುತ್ತಿದ್ದರೆ ನಮ್ಮ ಮಹಿಳಾ ಶಾಸಕಿಯರು ಯೋಚನೆ ಮಾಡಬೇಕು. ಈ ತರಹದಲ್ಲಿ ಮುಂದುವರಿದರೆ ಮಹಿಳೆಯರದ್ದೇ ಬೇರೆ ರಾಜ್ಯ ಕಟ್ಟತಕ್ಕಂಥ ಕಾಲವೂ ಬರಬಹುದೋ ಏನೋ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೇ, ಇದು ಬಹಳ ಅಪಾಯಕಾರಿ ಮಟ್ಟಕ್ಕೆ ಬಂದಿದೆಯಲ್ಲ? ಅವರು ಮಹಿಳೆಯರು ಪ್ರತ್ಯೇಕ ರಾಜ್ಯವನ್ನು ಕಟ್ಟುತ್ತಾರೆ ಎಂದು ಹೇಳುತ್ತಿದ್ದಾರೆ. ಮಹಿಳೆಯರೇ ಬೇರೆ ರಾಜ್ಯವನ್ನು ಕಟ್ಟುವಂಥ ಪರಿಸ್ಥಿತಿಯು ಬರುತ್ತದೆ ಎಂದು ಇವರು ಸೂಚನೆ ಕೊಡುತ್ತಿದ್ದಾರೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಶ್ರೀರಾಮರೆಡ್ಡಿಯವರಿಗೆ ಯಾವ ಸಮಸ್ಯೆ ಇಲ್ಲ. ಅವರಿಗೆ ಮಹಿಳೆಯರ ಸಮಸ್ಯೆ ಗೊತ್ತಿಲ್ಲ. ಈ ಪ್ರಕರಣವು 70 ದಿನಗಳಿಂದ ನಡೆಯುತ್ತಿದೆ. ಇದು ಗಂಭೀರವಾದ ಸಮಸ್ಯೆ. ಎಲ್ಲಾ ಸಂಘಸಂಸ್ಥೆಗಳು ಈ ಅವಧಿಯಲ್ಲಿ ಚಳುವಳಿ ಮಾಡಿದುವು. ಪತ್ರಿಕೆಯಲ್ಲಿ ಸಾಕಷ್ಟು ವಿಚಾರಗಳು ಬಂದಿವೆ. ಸರ್ಕಲ್ ಇನ್ಸ್‌ಪೆಕ್ಟರ್ ಗೋವಿಂದ ಎಂದು ಇದ್ದಾರೆ. ಆತನು ಈ ಕೇಸ್‌ನ್ನೂ ಕೂಡ ಪೂರ್ತಿಯಾಗಿ ಗೋವಿಂದ ಮಾಡಿದ್ದಾನೆ. ಅವನ ಹೆಸರೂ ಗೋವಿಂದ... ಕೇಸೂ ಗೋವಿಂದ. ಆದ್ದರಿಂದ ಇದು ಚಾಲೆಂಜಿಂಗ್ ಇಶ್ಯೂ. ದುರುದ್ದೇಶದಿಂದ ಮಾಡಿದ ಕೆಲಸ. ಇದು ರಾಜಕೀಯ ಒತ್ತಡಕ್ಕೆ ಆದದ್ದಲ್ಲ. ಕೆಂಪೇಗೌಡ ಎಂಬ ಒಬ್ಬ ಅವಿವೇಕಿ ಚಾಲೆಂಜ್ ಮಾಡಿ ತನ್ನ ಸೋದರಳಿಯನನ್ನು ಆ ಹುಡುಗಿಯ ಜೊತೆಗೆ ಮದುವೆ ಮಾಡಬಾರದು ಎನ್ನುವ ಹಠ ಸಾಧನೆಗೋಸ್ಕರ ಇದು ಆಗಿದೆ. 70 ದಿನಗಳಿಂದ ಆ ಹೆಣ್ಣು ಮಗು ಚಳುವಳಿ ಮಾಡುತ್ತಾ ಇದೆ. ಅವಳಿಗೆ ನ್ಯಾಯ ದೊರಕಿಸಿಕೊಡುವುದರಲ್ಲಿ ನಾವೆಲ್ಲರೂ ವಿಫಲರಾಗಿದ್ದೇವೆ. ಸರಕಾರ ಬಹಳ ಗಂಭೀರವಾಗಿ ಈ ವಿಷಯವನ್ನು ತೆಗೆದುಕೊಂಡು 24 ಗಂಟೆಯೊಳಗಾಗಿ ಆ ಹುಡುಗ-ಹುಡುಗಿಗೆ ಮದುವೆ ಮಾಡುವುದರ ಮೂಲಕ ಆ ಹುಡುಗಿಗೆ ನ್ಯಾಯ ದೊರಕಿಸಿ ಕೊಡಬೇಕೆಂದು ಒತ್ತಾಯ ಮಾಡುತ್ತಾ ಇದ್ದೇನೆ. ಅದರ ಜೊತೆಗೆ ಈ ವಿಚಾರದಲ್ಲಿ ಉಸ್ತುವಾರಿ ಸಚಿವರು, ಗೃಹಸಚಿವರು

ಬಹಳ ಗಂಭೀರವಾಗಿ ಚಿಂತನೆ ಮಾಡಿ ನ್ಯಾಯ ದೊರಕಿಸಿ ಕೊಡದಿದ್ದರೆ, ಪಕ್ಷಾತೀತವಾಗಿ ಎಲ್ಲಾ ಮಹಿಳಾ ಶಾಸಕಿಯರು ಈ ವಿಷಯದಲ್ಲಿ ಹೋರಾಟ ಮಾಡಿ ಆ ಹುಡುಗಿಗೆ ನ್ಯಾಯ ದೊರಕಿಸಿ ಕೊಡಬೇಕು. ನೀವು ಒಂದು ವೇಳೆ ನ್ಯಾಯ ದೊರಕಿಸಿಕೊಡದಿದ್ದರೆ ಮಹಿಳಾ ಶಾಸಕಿಯರು ಭಾಗವಹಿಸಬೇಕಾಗುತ್ತದೆ. ಮಹಿಳೆಯರಿಗೆ 33 ಪರ್‌ಸೆಂಟ್ ಮೀಸಲಾತಿ ಬೇಕೆಂದು ತಾವೇನು ಹೇಳುತ್ತಾ ಇದ್ದೀರಿ, ಈ ತರಹದಲ್ಲಿ ಅನ್ಯಾಯದ ವಿಚಾರದಲ್ಲಿಯೂ 33 ಪರ್‌ಸೆಂಟ್ ಎಂದು ಬಂದಿದ್ದಾರೆ ಎಂದು ತೀರ್ಮಾನ ಮಾಡಿಸಿದ್ದರೆ, ಇದರಲ್ಲಿ ಎಲ್ಲರೂ ಪಕ್ಷಾತೀತವಾಗಿ ಹೋರಾಟ ಮಾಡಿ ಶೈಲಜಾಳ ಬಾಳಿಗೆ ನ್ಯಾಯವನ್ನು ದೊರಕಿಸಿಕೊಡಬೇಕು. ಮಾನ್ಯ ಸಭಾಧ್ಯಕ್ಷರು ತಾವುಗಳು ಮಧ್ಯೆ ಪ್ರವೇಶ ಮಾಡಿ, ಆ ಹೆಣ್ಣು ಮಗುವಿಗೆ ಬಾಳು ಕೊಡತಕ್ಕಂಥ ವಿಚಾರದಲ್ಲಿ ಸರಕಾರವು ಗಂಭೀರವಾಗಿ ಚಿಂತನೆ ಮಾಡಬೇಕೆಂದು, ಕೆಲಸ ಮಾಡಬೇಕೆಂದು ಹೇಳುತ್ತಾ ತಮ್ಮ ಮೂಲಕ ಸರಕಾರದ ಗಮನವನ್ನು ಸೆಳೆಯುತ್ತೇನೆ.

+ ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಹಿಂದೆ ಕೂಡ ಮಂಡ್ಯ ಜಿಲ್ಲೆಯಲ್ಲಿ ಇಂಥ ಪ್ರಕರಣ ನಡೆದ ಬಗ್ಗೆ ಪ್ರಸ್ತಾಪವಾಗಿತ್ತು. ಆಗ ಈ ಸದನದಲ್ಲಿ ಎಲ್ಲರೂ ಒಂದೇ ಅಭಿಪ್ರಾಯದಿಂದ ತಕ್ಷಣ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಪೊಲೀಸರಿಗೂ ಎಚ್ಚರಿಕೆಯನ್ನು ಕೊಟ್ಟಿದ್ದರು. ಅದೇ ರೀತಿಯಲ್ಲಿ ಸದನದ ಎಲ್ಲಾ ಮಹಿಳಾ ಶಾಸಕಿಯರೂ ಕೂಡ ತಾವು ಅಲ್ಲಿಗೆ ಹೋಗಿ ಪ್ರಕರಣವನ್ನು ಇತ್ಯರ್ಥ ಮಾಡುತ್ತೇವೆ ಎಂದು ಹೇಳಿದ್ದರು. ಅಷ್ಟು ಗಂಭೀರವಾಗಿ ಇಲ್ಲಿ ಚರ್ಚೆ ನಡೆದಿತ್ತು. ಇದು ಪದೇ ಪದೇ ಅಲ್ಲಿ ಮರುಕಳಿಸುತ್ತಾ ಇದೆ. 70 ದಿನಗಳಿಂದ ಅಲ್ಲಿ ಸತ್ಯಾಗ್ರಹ ಮಾಡುತ್ತಿರುವ ಆ ಹುಡುಗಿಯ ಬಗ್ಗೆ ಕನಿಷ್ಟವಾಗಿಯಾದರೂ ಆಲೋಚನೆ ಮಾಡಲು ಈ ನಮ್ಮ ಸರಕಾರದ ಅಧಿಕಾರಿಗಳಿಗೆ ಏನೂ ಜವಾಬ್ದಾರಿ ಇಲ್ಲ ಎಂದು ಹೇಳುವುದಾದರೆ, ಅಂಥ ಅಧಿಕಾರಿಗಳ ಮೇಲೆ ತತ್‌ಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ಕ್ರಮ ತೆಗೆದುಕೊಂಡಿಲ್ಲ ಏಕೆಂಬುದಕ್ಕೆ ಉಸ್ತುವಾರಿ ಸಚಿವರು ಮತ್ತು ಸರಕಾರದವರು ಉತ್ತರ ಹೇಳಬೇಕಾಗುತ್ತದೆ. ಹಾಗಾದರೆ 70 ದಿನಗಳವರೆಗೂ ಸತ್ಯಾಗೃಹ ಮಾಡುವವರನ್ನು ಏನೆಂದು ಯಾರು ಕೇಳುವವರೇ ಇಲ್ಲವೇ? ಏನು ಪರಿಸ್ಥಿತಿ ಎಂದು ಯಾರಾದರೂ ಕೇಳುವುದು ಬೇಡವೆ?

ಶ್ರೀ ವಾಟಾಳ್ ನಾಗರಾಜ್: ಈ ಪ್ರಕರಣವು 7 ತಿಂಗಳುಗಳಿಂದ ನಿರಂತರವಾಗಿ ನಡೆದಿದ್ದರೂ ಎಲ್ಲಾ ಸಂಘಸಂಸ್ಥೆಗಳು ಹೋಗಿ ತಮ್ಮ ಅನುಕಂಪವನ್ನು ಅವರಿಗೆ ತೋರಿಸಿದ್ದರೂ ಸರಕಾರ, ಮಂತ್ರಿಗಳು ಯಾರಾದರೂ ಅಲ್ಲಿಗೆ ಹೋಗಿ ಮುಂದೆ ಏನು ಮಾಡಬೇಕೆಂಬ ವ್ಯವಸ್ಥೆ ಮಾಡುವ ಬಗ್ಗೆ ಕಾಳಜಿ ಇಲ್ಲ ಎಂದು ಹೇಳಿದರೆ ಪರಿಸ್ಥಿತಿ ಏನು? ಇಂಥ ಅನೇಕ ಪ್ರಕರಣಗಳು ರಾಜ್ಯದಾದ್ಯಂತ ನಡೆಯುತ್ತಿರುತ್ತವೆ. ಅದಕ್ಕೋಸ್ಕರ ತಮ್ಮ ಮೂಲಕ ಸರಕಾರಕ್ಕೆ ಹೇಳುತ್ತಾ ಇದ್ದೇನೆ, ಸರಕಾರದವರು ಇವರಿಬ್ಬರನ್ನೂ ಸೇರಿಸಿ ಸರಕಾರದ ಪರವಾಗಿ ಮದುವೆಯನ್ನು ಮಾಡಿಸತಕ್ಕಂಥ ಕೆಲಸವನ್ನು ಸರಕಾರವು ನೇರವಾಗಿ ಮಾಡಬೇಕು. ಇಲ್ಲವಾದರೆ ಇದರಲ್ಲಿ ಏನಾದರೂ ರಾಜಕೀಯ ಇದ್ದರೆ

ಅದನ್ನೂ ಹೇಳಬೇಕು. ಇದ್ದರೆ ಹೌದು, ರಾಜಕೀಯ ಇದೆ, ಕೆಂಪೇಗೌಡರ ಪರ ಬೇರೆ, ಶೈಲಜಾ ಪರ ಬೇರೆ, ಆದ್ದರಿಂದಾಗಿ ನಮಗೆ 7 ತಿಂಗಳುಗಳಿಂದ ಇತ್ಯರ್ಥ ಮಾಡಲು ಆಗಿಲ್ಲ ಎಂಬುದನ್ನಾದರೂ ಹೇಳಿ. ರಾಜಕೀಯ ಇಲ್ಲವಾದಲ್ಲಿ ಇಷ್ಟು ವಿಳಂಬ ಏಕೆ? ಇಂಥ ಪ್ರಕರಣಗಳಲ್ಲಿ ಅನೇಕ ಕಡೆಗಳಲ್ಲಿ ಪೊಲೀಸ್ ಸ್ಟೇಶನ್‌ಗಳಲ್ಲಿ ಹೀಗೆ ಮದುವೆ ಮಾಡಿದ ಪ್ರಕರಣಗಳೂ ಉಂಟು. ಆದ್ದರಿಂದ ನೇರವಾಗಿ ಮಾನ್ಯ ಹಿರಿಯ ಹಾಗೂ ಉಸ್ತುವಾರಿ ಸಚಿವರಿಗೆ ಹೇಳುತ್ತೇನೆ. ಈ ಮದುವೆಯ ಕಾರ್ಯವನ್ನು ತಾವುಗಳು ಎಷ್ಟು ಬೇಗ ಮಾಡುವುದಕ್ಕೆ ಸಾಧ್ಯ? ಇವರ ಮದುವೆ ಎಷ್ಟು ಬೇಗ ಮಾಡಿಸುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಅರಗ ಜ್ಞಾನೇಂದ್ರ: ಮಂಡ್ಯದಲ್ಲಿ ಆಗಾಗ ಪ್ರೇಮಿಸಿ ಕೈ ಕೊಡುವ ಪ್ರಕರಣಗಳು ಆಗುತ್ತಾ ಇವೆ... ಈ ಬಗ್ಗೆ ಸ್ವಲ್ಪ ವಿಮರ್ಶೆ ಆಗಬೇಕು....

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್: ಮಾನ್ಯ ಅಧ್ಯಕ್ಷರೇ, ಮಹಿಳೆಯರಿಗೆ ಸಂಬಂಧಪಟ್ಟಂಥ ವಿಚಾರವನ್ನು ನಮ್ಮ ಸಹೋದರ ಶಾಸಕರು ಮಹಿಳೆಯರ ಪರವಾಗಿ ಎತ್ತಿದ್ದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಈ ಪ್ರಶ್ನೆಯು ಶೈಲಜಾ ಎನ್ನುವವಳು ಒಬ್ಬ ಹುಡುಗನನ್ನು ಪ್ರೀತಿಸಿ ಮದುವೆ ಮಾಡಿಕೊಳ್ಳತಕ್ಕಂಥ ವಿಷಯ. ಇಂಥ ವಿಷಯಗಳು ನಿರಂತರವಾಗಿ ಪತ್ರಿಕೆಗಳಲ್ಲಿ, ಸಂಸಾರದಲ್ಲಿ, ಸಮಾಜದಲ್ಲಿ ಬರುತ್ತಾ ಇರುತ್ತದೆ. ಇದಕ್ಕೆ ಒಂದು ಪರಿಹಾರವನ್ನು ಕಂಡುಹಿಡಿದು ಇಂಥ ವಿಷಯಗಳಿಗೆ ರಾಜಕೀಯ ಬಣ್ಣ ಕೊಡದೇನೇ ನೋಡ ಬೇಕು. ಹೆಣ್ಣುಮಗಳಿಗೆ ತಾನು ಪ್ರೀತಿಸತಕ್ಕಂಥ ಅಧಿಕಾರ, ತಾನು ಪ್ರೀತಿಸಿದವನನ್ನು ಮದುವೆ ಮಾಡಿಕೊಳ್ಳತಕ್ಕಂಥ ಅಧಿಕಾರ, ಇನ್ನೂ ಪುರುಷಪ್ರಧಾನವಾದಂಥ ಈ ದೇಶದಲ್ಲಿ, ಹೋಂ ಡಿಪಾರ್ಟ್‌ಮೆಂಟ್ ಅಥವಾ ಇನ್ನಾವುದೇ ಡಿಪಾರ್ಟ್‌ಮೆಂಟ್‌ಗಳ ಚಿತಾವಣೆಯಿಂದ ಸಹಸ್ರಾರು ಇಂಥ ಪ್ರಕರಣಗಳು ಗಮನಕ್ಕೆ ಬಂದಾಗಲೂ ಕೂಡ, ಎಷ್ಟೋ ಬಾರಿ ಮಹಿಳಾ ಸಂಘಟನೆಗಳು ಹೋರಾಟ ಮಾಡಿದಾಗಲೂ ಕೂಡ, ನ್ಯಾಯವು ಅವರಿಗೆ ದೊರಕದೇ ಇರತಕ್ಕಂಥ ವಿಷಯದಲ್ಲಿ ಇವೊತ್ತು ನಮ್ಮ ಪರವಾಗಿ ಮಹನೀಯರು ನಮ್ಮ ಪರವಾಗಿ ನಿಂತು ತಂದಿದ್ದಾರೆ. ಅವರಿಗೆ ಎಲ್ಲಾ ಶಾಸಕಿಯರ ಪರವಾಗಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ.

ಶ್ರೀ ವಾಟಾಳ್‌ನಾಗರಾಜ್: 'ಈ ಸರಕಾರವು ಸೂಕ್ತ ತೀರ್ಮಾನ ಕೈಗೊಳ್ಳದಿದ್ದರೆ ಮಹಿಳಾ ಸದಸ್ಯೆಯರು, ಸಚಿವರು, ಸಂಪೂರ್ಣವಾಗಿ ಜನತಾದಳ ಸರಕಾರಕ್ಕೆ ರಾಜೀನಾಮೆ ಕೊಡಬೇಕು, ಆಗ ನಮ್ಮ ಬೆಂಬಲ ಅವರಿಗೆ ಇದೆ.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್: ಮಹಿಳೆಯರ ವಿಷಯ ಬಂದಾಗ, ನಿಜವಾಗಿಯೂ ಮಹಿಳೆಯರ ಬಗ್ಗೆ ಅವರಿಗೆ ಅಭಿಮಾನವಿದ್ದರೆ ಅವರೇ ಮೊದಲು ರಾಜೀನಾಮೆ ಕೊಡಲಿ.

ಉಪಾಧ್ಯಕ್ಷರು: ಈ ಪ್ರಕರಣದ ಬಗ್ಗೆ ಯಾರೂ ರಾಜೀನಾಮೆ ಕೊಡುವ ಅವಶ್ಯಕತೆ ಇಲ್ಲ. ನೀವು ಅವರು, ಎಲ್ಲರೂ ಕೂಡಿ ಹೋಗಿ ಮದುವೆ ಮಾಡಿಸಿ ಬಿಡಿ.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್: ಮಹಿಳೆಯರಿಗೆ ಸಾಂಸಾರಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಅನ್ಯಾಯವಾಯಿತು ಅಂದರೆ, ಅದು ಪುರಷರದ್ದೇ ಕೈವಾಡ... ಇಂಥ ಪ್ರಕರಣಗಳಲ್ಲೂ ಪುರುಷರದ್ದೇ ಕೈವಾಡ ಇರುತ್ತದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇವೆ. ಆ ಹುಡುಗನ ಸೋದರ ಮಾವನು ಪುರುಷ. ಮದುವೆಯಾಗುವ ಗಂಡು ಪುರುಷ. ಹೀಗೆ ಇಂಥ ವಿಷಯಗಳು ಬಂದಾಗ ಸಾಧ್ಯವಾದಷ್ಟು ಯಾವುದೇ ರಾಜಕೀಯ ಬಣ್ಣ ಕೊಡದೇ ಯಾವುದೇ ಅಧಿಕಾರಿಗಳ ಬಣ್ಣಕೊಡದೇ ನೋಡಿ ಮಹಿಳೆಯರಿಗೆ ತಮ್ಮ ಸಾಂಸಾರಿಕ ಜೀವನದಲ್ಲಿ ನೆಮ್ಮದಿಯನ್ನು ತಂದುಕೊಡಬೇಕು. ಇದು ನಮ್ಮ ಸಮಾಜದ ಅದರಲ್ಲಿಯೂ ಪುರುಷರ ಕರ್ತವ್ಯವಾಗಿದ್ದು ಇದಕ್ಕೆ ವಿಶೇಷತಃ ಪುರುಷರು ಮುಂದಾಗಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಉಪಾಧ್ಯಕ್ಷರೇ, ನಮ್ಮ ತೀರ್ಥಹಳ್ಳಿ ಶಾಸಕರು ಮಂಡ್ಯದವರು ಪ್ರೇಮಿಸಿ ಕೈಕೊಡುತ್ತಾರೆ, ಅವರಲ್ಲಿ ಕೈಕೊಡುವ ಪ್ರೇಮ ಜಾಸ್ತಿ ಎಂದು ಹೇಳಿದರು. ಸುಮಾರು ಹತ್ತಿಪ್ಪತ್ತು ವರ್ಷಗಳ ಹಿಂದೆ ಮಂಡ್ಯ ಮತ್ತು ಮೈಸೂರಿನಂತಹ ಬಯಲು ಸೀಮೆ ಗಂಡುಗಳಿಗೆ ಹೆಣ್ಣು ಕೊಡುತ್ತಿದ್ದವರೇ ಮಲೆನಾಡಿನವರು. ಅವರಿಗೆ ಗೊತ್ತಿದೆ ಬಯಲು ಸೀಮೆ ಹುಡುಗರು ಎಷ್ಟು ಪ್ರೀತಿಸುತ್ತಾರೆ ಎನ್ನುವ ವಿಚಾರ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಹೆಣ್ಣುಮಕ್ಕಳ ಬಗ್ಗೆ ನಾವು ಎಷ್ಟು ವಿನಯವಾಗಿದ್ದೇವೆ ಎಂದು ನಾಗೇಗೌಡರು ಹೇಳುತ್ತಿದ್ದಾರೆ. ಇದರ ಬಗ್ಗೆ ಸತ್ಯಾಸತ್ಯತೆಯನ್ನು ಅರಿತುಕೊಳ್ಳುವುದಕ್ಕೋಸ್ಕರ ಶ್ರೀರಾಮರೆಡ್ಡಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆಯಾಗಲೇಬೇಕು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮೊದಲು ಬಯಲುಸೀಮೆ ಗಂಡಿಗೆ ಮಲೆನಾಡಿನವರು ಹೆಣ್ಣು ಕೊಡುತ್ತಿರಲಿಲ್ಲ. ಏಕೆಂದರೆ ಆ ಗಂಡುಗಳು ಬಲುಮೊಂಡರು ಎಂದು. ಆ ಮೊಂಡುತನ ಮಾಡಿಯೇ ಅವರು ಆ ಹುಡುಗಿಗೆ ಈಗ ಕೈಕೊಡುತ್ತಿರುವುದು. ಮಂಡ್ಯ ಜಿಲ್ಲೆಯವರು ಎಷ್ಟು ಮೊಂಡರು ಎಂದರೆ ಭಾರತ ದೇಶದಲ್ಲಿ ಅವರಷ್ಟು ಸಾಂಸ್ಕೃತಿಕ ಬದಲಾವಣೆ ಮಾಡಿದವರೇ ಇಲ್ಲ. ಸುಮಾರು 30 ರಿಂದ 40 ಸಾವಿರ ವರದಕ್ಷಿಣೆ ಇಲ್ಲದೆ, ಆಡಂಬರವಿಲ್ಲದೆ ಸರಳ ವಿವಾಹಗಳನ್ನು ಮಾಡುವುದರ ಮೂಲಕ ಇಡೀ ದೇಶಕ್ಕೆ ಒಂದು ಮಾದರಿಯಾದಂತಹ ಜಿಲ್ಲೆ ಅದು. ಹೆಣ್ಣುಮಕ್ಕಳ ಬಾಳಿಗೆ ಅತ್ಯಂತ ಹೆಚ್ಚಿನ ಗೌರವ ತರುವಂತಹ ಜಿಲ್ಲೆ. ಆದರೆ ಯಾವುದೋ ಒಂದೆರಡು ಪ್ರಕರಣಗಳು ಈ ರೀತಿ ಆಗಿರಬಹುದಷ್ಟೆ. ಈ ವಿಚಾರದಲ್ಲಿ ರಾಜಕೀಯ ಸ್ವಲ್ಪವೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್: ಅದಕ್ಕೆ ನಿಂಗೇಗೌಡರು ಮತ್ತು ಶೈಲಜಾಳ ಹಣೆಬರಹ ಈ ರೀತಿಯಾಗಿರುವುದು.

ಶ್ರೀ ಕೆ.ಎನ್.ನಾಗೇಗೌಡ: ನಮ್ಮ ಎಸ್.ಎಂ.ಕೃಷ್ಣಾ ಅವರು ಮತ್ತು ಕಾಗೋಡು ತಿಮ್ಮಪ್ಪನವರ ವಿಶ್ವಾಸದಿಂದ ನಾವು ಮಲೆನಾಡಿನಿಂದಲೇ ಹೆಣ್ಣನ್ನು ಮದುವೆ ಮಾಡಿಕೊಳ್ಳಲು ಪ್ರಾರಂಭ ಮಾಡಿದ ಕಾಲದಿಂದಲೂ ಅವರಿಗೆ ಅದರ ಹಿನ್ನೆಲೆ ಗೊತ್ತಿದೆ. ಆ ಹಿನ್ನೆಲೆಯನ್ನು ತಿಳಿದುಕೊಂಡರೆ ಬಹಳ ಅನುಕೂಲ. ನಮ್ಮ ಬಯಲು ಸೀಮೆಯ ಸಾಂಸಾರಿಕ ಜೀವನ ಬಹಳಷ್ಟು ಚೆನ್ನಾಗಿದೆ, ಎಂದು ಇಷ್ಟಪಟ್ಟು ಬಂದವರಲ್ಲಿ ಮಲೆನಾಡು ಕಡೆಯವರೇ ಹೆಚ್ಚು.

ಶ್ರೀ ವಾಟಾಳ್ ನಾಗರಾಜ್: ಅಂದರೆ ಬೇರೆ ಜಿಲ್ಲೆಗಳಲ್ಲಿ ಸಾಂಸಾರಿಕ ಜೀವನ ಸರಿಯಿಲ್ಲ ಎಂಬುದು ನಿಮ್ಮ ಉದ್ದೇಶವೇ? ಹಾಗೆಂದರೆ ಉಳಿದವರ ಗತಿ ಏನಾಗಬೇಕು?

ಶ್ರೀ ಕೆ.ಎನ್.ನಾಗೇಗೌಡ: ಇದಕ್ಕೆ ಮೊದಲು ಇನ್ನೊಂದು ಪ್ರಕರಣ ಈ ರೀತಿ ಆಯಿತು ಮತ್ತೆ ಅದು ಮರುಕಳಿಸಿರುತ್ತದೆ ಎಂದು ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದರು. ಆ ಪ್ರಕರಣ ನನ್ನ ಕ್ಷೇತ್ರದಲ್ಲಿಯೇ ಆಯಿತು. ಈ ಸದನದಲ್ಲಿ ಪುಟ್ಟಣ್ಣಯ್ಯನವರು ಅದನ್ನು ಪ್ರಸ್ತಾಪ ಮಾಡಿದ್ದರು. ನಾನೇ ನಿಂತು ಆ ಮದುವೆ ಮಾಡಿಸಿದ್ದೇನೆ. ಇವತ್ತು ಅವರು ಅತ್ಯುತ್ತಮವಾದಂತಹ ಜೀವನವನ್ನು ಕೆ.ಎಂ.ದೊಡ್ಡಿಯಿಂದ ಮೂರು ಕಿಲೋಮೀಟರ್ ದೂರದಲ್ಲಿರುವ ಒಂದು ಗ್ರಾಮದಲ್ಲಿ ಮಾಡುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಆ ಸಮಸ್ಯೆ ನಮ್ಮ ಗಮನಕ್ಕೆ ಬಂದ ತಕ್ಷಣ ನಾವು ಅದನ್ನು ಬಗೆಹರಿಸಿದ್ದೇವೆ. ಈಗ ಶೈಲಜ ಮತ್ತು ನಿಂಗೇಗೌಡರ ವಿಚಾರವನ್ನು ಮಾನ್ಯ ಪುಟ್ಟಣ್ಣಯ್ಯನವರು ಪಕ್ಷಾತೀತವಾಗಿ ನಮ್ಮ ಗಮನಕ್ಕೆ ತಂದಿದ್ದಾರೆ. ಯಾವುದೇ ರಾಜಕೀಯವಿಲ್ಲದೆ ಸುಮಾರು 7 ತಿಂಗಳಿನಿಂದ ಈ ವಿಚಾರದಲ್ಲಿ ಪ್ರತಿಭಟನೆ ನಡೆದಿದೆ. ನಾನು ಉನ್ನತ ಪೊಲೀಸ್ ಅಧಿಕಾರಿಗಳ ಜೊತೆಯಲ್ಲಿ ಈ ಬಗ್ಗೆ ಮಾತನಾಡಿದ್ದೇನೆ. ಇಲ್ಲಿ ಕೇಸ್ ರಿಜಿಸ್ಟರ್ ಮಾಡಿ ಅರೆಸ್ಟ್ ಮಾಡಿದರೆ ಇವರಿಬ್ಬರ ಮದುವೆ ಆಗುವುದಿಲ್ಲ. ಆ ರೀತಿ ಕ್ರಮ ತೆಗೆದುಕೊಳ್ಳಲು ಸಾಧ್ಯವಿದ್ದರೆ ನಾನು ಮತ್ತು ಪುಟ್ಟಣ್ಣಯ್ಯನವರು ಕ್ರಮ ತೆಗೆದುಕೊಳ್ಳುತ್ತಿದ್ದೆವು. ನಾವು ಇಲ್ಲಿ ಮಹತ್ವ ಕೊಟ್ಟದ್ದು ಯಾವ ವಿಚಾರಕ್ಕೆ ಎಂದರೆ ಇವರಿಬ್ಬರ ಮದುವೆಯ ವಿಷಯಕ್ಕೆ. 14ನೇ ತಾರೀಖಿನ ದಿವಸ ಮಂಡ್ಯದಲ್ಲಿ ಎಸ್‌ಪಿ ಮತ್ತು ಡಿಸಿ ಅವರನ್ನು ಮತ್ತು ಪುಟ್ಟಣ್ಣಯ್ಯನವರನ್ನು ಕರೆದು ಮಾತುಕತೆ ನಡೆಸಿ ಅವರ ಸಂಬಂಧಿಕ ಕೆಂಪೇಗೌಡ ಎನ್ನುವವನು ಏನು ಕುತಂತ್ರ ಮಾಡಿದ್ದಾರೆ ಅವನಿಗೆ ಎಚ್ಚರಿಕೆ ಕೊಟ್ಟು ಎಷ್ಟು ಜಾಗ್ರತೆಯಾಗಿ ಮದುವೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಅಷ್ಟು ಬೇಗ ಮದುವೆ ಮಾಡಿಸುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಇಲ್ಲಿ ಕಾನೂನಿಗಿಂತ ಮಾನವೀಯತೆ ಮತ್ತು ಪ್ರೀತಿಯ

ದೃಷ್ಟಿಯಿಂದ ಹಾಗೂ ಹೊಂದಾಣಿಕೆ ದೃಷ್ಟಿಯಿಂದ ಇವರಿಬ್ಬರನ್ನೂ ಕೂಡಿಸಲು ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತೇವೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

(ಇ) ಡೀಸಲ್ ಬೆಲೆ ಏರಿಕೆಯಿಂದ ಯಾಂತ್ರಿಕ ಮೀನುಗಾರರಿಗೆ ತೊಂದರೆಯಾಗಿರುವ ಬಗ್ಗೆ.

+ ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು): ಸನ್ಮಾನ್ಯ ಉಪಾಧ್ಯಕ್ಷರೆ, ಇತ್ತೀಚೆಗೆ ಆದಂತಹ ಡೀಸಲ್ ಬೆಲೆ ಏರಿಕೆಯಿಂದಾಗಿ ವಿಶೇಷವಾಗಿ ಯಾಂತ್ರಿಕ ಮೀನುಗಾರಿಕಾ ಬಂಧುಗಳು ಸಾಕಷ್ಟು ತೊಂದರೆಯಲ್ಲಿ ಸಿಕ್ಕಿಕೊಂಡಿದ್ದಾರೆ. ಅಷ್ಟು ಮಾತ್ರವಲ್ಲ, ಅವರು ಬ್ಯಾಂಕಿಗೆ ಸಾಲದ ಕಂತುಗಳನ್ನು ಹಾಗೂ ಬಡ್ಡಿಯನ್ನು ಮರುಪಾವತಿ ಮಾಡುವುದೂ ಸಹ ಕಷ್ಟವಾಗುವಂತಹ ಪರಿಸ್ಥಿತಿ ಇವತ್ತು ಬಂದಿದೆ. ಸಾಗರೋತ್ಪನ್ನಗಳನ್ನು ವಿದೇಶಕ್ಕೆ ರಫ್ತು ಮಾಡಿ ನಮ್ಮ ದೇಶಕ್ಕೆ ವಿದೇಶಿ ವಿನಿಮಯವನ್ನು ಕೊಡುವಂತಹ ಈ ಮೀನುಗಾರಿಕೆಗೆ ಹಾಗೂ ಈ ಮೀನುಗಾರ ಬಂಧುಗಳಿಗೆ ತಾವು ಖಂಡಿತ ಸಹಾಯ ಮಾಡಬೇಕು ಎಂದು ಮೇಲಿಂದ ನಮಗೆ ಮನವಿಗಳು ಬರುತ್ತಿವೆ. ಅದಕ್ಕೆ ಪೂರಕವಾಗಿ ನಾನು ಕೇಳುತ್ತಿರುವುದು 1984ನೇ ಇಸವಿಯಲ್ಲಿ ಒಂದು ಲೀಟರ್ ಡೀಸಲ್‌ಗೆ 3 ರೂಪಾಯಿ 80 ಪೈಸೆ ಇದ್ದಂತಹ ಸಂದರ್ಭದಲ್ಲಿ ಕೊಟ್ಟಿರುವಂತಹ ಸಹಾಯಧನ ಈ ಹದಿನಾಲ್ಕು ವರ್ಷಗಳ ನಂತರವೂ ಕೂಡ ಮುಂದುವರೆಯುತ್ತಿದೆ. ಅಂದರೆ 14 ವರ್ಷಗಳ ಹಿಂದೆ ಇದ್ದಂತಹ ಸಬ್ಸಿಡಿಯನ್ನೇ ಈಗಲೂ ಮುಂದುವರೆಸಲಾಗುತ್ತಿದೆ. ಈಗ ಬಹುಶಃ ಒಂದು ಲೀಟರ್ ಡೀಸಲ್‌ಗೆ ಹೆಚ್ಚು ಕಡಿಮೆ ಸೇಲ್ಸ್ ಟ್ಯಾಕ್ಸ್ ಮತ್ತು ಇನ್ನಿತರ ತೆರಿಗೆಗಳು ಸೇರಿದರೆ 5 ರೂಪಾಯಿ 40 ಪೈಸೆ ಆಗುತ್ತದೆ. ಈ ಹಿನ್ನೆಲೆಯಲ್ಲಿ ನಾನು ವಿನಂತಿ ಮಾಡುವುದೇನೆಂದರೆ ಮುಂದೆ ಬರುವಂತಹ ಬಜೆಟ್ ಅಧಿವೇಶನ ಸಮಯದಲ್ಲಿ ಡೆಲಿವರಿ ಪಾಯಿಂಟ್‌ನಲ್ಲಿ 5 ರೂಪಾಯಿ 40 ಪೈಸೆಗೆ ಸಿಗುವಂತೆ ಡೀಸೆಲ್ ಸಬ್ಸಿಡಿಯನ್ನು ಕೊಡಬೇಕು. ಮತ್ತು ಮೀನುಗಾರಿಕೆಗೆ ಪರಿಹಾರವನ್ನು ಕೊಡಬೇಕು ಎನ್ನುವಂತಹ ವಿನಂತಿಯನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತೇನೆ. ಇದರ ಜೊತೆಗೆ ಪ್ರಿಂಟಿಂಗ್ ಎಂದು ಯಾವ ಒಂದು ಕಲೆ ಇದೆ ಅದು ಕೇವಲ ಕಾಂಟ್ರಾಕ್ಟ್ ವರ್ಕಿನ ಆಧಾರದ ಮೇಲೆ ಆಗುವಂತಹ ಕೆಲಸ. ಇದರ ಮೇಲೆ ಖಂಡಿತ ಟ್ಯಾಕ್ಸ್ ಹಾಕುವುದು ಸರಿಯಲ್ಲ. ಮುದ್ರಣ ವಸ್ತುಗಳ ಮೇಲೆ ತೆರಿಗೆ ಹಾಕಬಾರದು ಎಂಬ ಮನವಿ ಕೂಡ ರಾಜ್ಯಾದ್ಯಂತ ನಮಗೆ ಬರುತ್ತಿದೆ. ಈ ಬಗ್ಗೆ ಕೂಡ ಮುಂದಿನ ಬಜೆಟ್ ಅಧಿವೇಶನ ಸಮಯದಲ್ಲಿ ವಿನಾಯಿತಿ ಕೊಡಬೇಕೆಂದು ನಾನು ಸರ್ಕಾರದಲ್ಲಿ ವಿನಂತಿ ಮಾಡುತ್ತಿದ್ದೇನೆ.

+ ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಉಪಾಧ್ಯಕ್ಷರೆ, ಉತ್ತರ ಕನ್ನಡ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಸುಮಾರು ಆರು ಸಾವಿರಕ್ಕಿಂತಲೂ ಹೆಚ್ಚು ಯಾಂತ್ರಿಕೃತ ದೋಣಿಗಳಿವೆ. ಈಗಾಗಲೇ ಡೀಸಲ್ ಬೆಲೆ 12 ರಿಂದ 18 ಪೈಸೆ ಏರಿರುವಾಗ ಮೀನುಗಾರಿಕೆಗೆ ಹೋಗುವ ದೋಣಿಗಳು ಕನಿಷ್ಠ 45 ರಿಂದ 51 ಲೀಡಿ